


ಸೈರಾಂಗ್ ಬಳಿ ನಿರ್ಮಾಣಗೊಂಡಿರುವ ರೈಲ್ವೆ ಸೇತುವೆ

ಅತಿ ಕಡಿಮೆ ಅವಧಿಯಲ್ಲಿ ವಿಮಾನ ನಿಲ್ದಾಣ ಕಟ್ಟಲು ಸಾಧ್ಯವಾಗಿದೆ. ಎಲ್ಲ ಸವಲತ್ತುಗಳು ದೊರೆತರೆ ಕೈಗಾರಿಕೆಗಳನ್ನೂ ಕಟ್ಟಬಲ್ಲರು. ಹಾಗಾಗಿ ರೈಲು ಆರಂಭವಾಗುತ್ತಿರುವುದನ್ನು ನಮ್ಮ ಜನರು ಸಂಭ್ರಮದಿಂದ ಸ್ವಾಗತಿಸುತ್ತಿದ್ದಾರೆ’ ಎಂದು ಮಿಜೋ ಜನರ ಸಡಗರವನ್ನು ಚಾಲಕ ಪೇಕು (ಪೇಖುಲ್ವ) ವಿವರಿಸಿದರು.

### ಸಾಕ್ಷರತೆಯಲ್ಲಿ ಮುಂದು

ಸಾಕ್ಷರತೆಯಲ್ಲಿ ದೇಶದಲ್ಲಿಯೇ ಕೇರಳ ಮೊದಲ ಸ್ಥಾನದಲ್ಲಿದ್ದರೆ, ಎರಡನೇ ಸ್ಥಾನದಲ್ಲಿ ಮಿಜೋರಾಂ ಇದೆ. ಬ್ರಿಟಿಷರು ಇಲ್ಲಿ ಬಹಳ ಬೇಗ ಶಿಕ್ಷಣ ಪದ್ಧತಿ ಆರಂಭಿಸಿರುವುದರಿಂದ ಇಲ್ಲಿನ ಸಾಮಾನ್ಯ ಜನರೂ ತಾಯಿನುಡಿ ಮಿಜೋ ಜೊತೆಗೆ ಇಂಗ್ಲಿಷ್ ಕೂಡ ಮಾತನಾಡುತ್ತಾರೆ. ಹಿಂದಿ ಬರುವುದಿಲ್ಲ. ಹಿಂದಿಗಿಂತ ಬಂಗಾಳಿ ಹೆಚ್ಚು ಅರ್ಥ ಮಾಡಿಕೊಳ್ಳುತ್ತಾರೆ. ಶಿಕ್ಷಣ ನೀಡಲು ಬ್ರಿಟಿಷರು ರೋಮನ್ ಲಿಪಿ ಬಳಸಿದ್ದರಿಂದ ಅದುವೇ ಮಿಜೋ ಲಿಪಿಯೂ ಆಗಿದೆ.

### ಕಾಡುವ ಆತಂಕ

ರೈಲು ಆರಂಭವಾಗುತ್ತಿರುವ ಬಗ್ಗೆ ದೊಡ್ಡ ಮಟ್ಟದಲ್ಲಿ ಜನರು ಖುಷಿ ವ್ಯಕ್ತಪಡಿಸುತ್ತಿದ್ದರೂ ಒಟ್ಟಿಗೆ ಆತಂಕವನ್ನೂ ಹೊರಹಾಕುತ್ತಿದ್ದಾರೆ. ಮಿಜೋರಾಂಗೆ ಮ್ಯಾನ್ಮಾರ್ ಮತ್ತು ಬಾಂಗ್ಲಾದೇಶದಿಂದ ನುಗ್ಗುವ ನುಸುಳುಕೋರರಿಗೆ ರೈಲು ವರದಾನವಾಗಲಿದೆ ಎಂಬುದು ಅವರ ಆತಂಕ.

2011ರಲ್ಲಿ 10 ಲಕ್ಷ ಜನಸಂಖ್ಯೆಯನ್ನು ಮಿಜೋರಾಂ ಹೊಂದಿತ್ತು. 2025ರ ಹೊತ್ತಿಗೆ 13 ಲಕ್ಷದಿಂದ

## ಜೂಮು ಕೃಷಿ ಪದ್ಧತಿ

ಕಾಡು ಕಡಿದು ಸುಟ್ಟು ಬರಿದಾದ ನೆಲದಲ್ಲಿ ಬೆಳೆ ತೆಗೆಯುವ ಅತ್ಯಂತ ಪ್ರಾಚೀನ ‘ಜೂಮ್’ ಕೃಷಿ ಪದ್ಧತಿ ಇತ್ತೀಚೆಗೆ ಕಡಿಮೆಯಾಗಿದ್ದರೂ ಪೂರ್ತಿ ನಿಂತಿಲ್ಲ. ಆಧುನಿಕ ಕೃಷಿಗೆ ಮಿಜೋ ಜನರು ನಿಧಾನಕ್ಕೆ ತೆರೆದುಕೊಳ್ಳುತ್ತಿದ್ದಾರೆ. ತೋಟಗಾರಿಕೆ ಮತ್ತು ಬಿದಿರು ಬೇಸಾಯಗಳು ‘ಜೂಮ್’ ಪದ್ಧತಿಯ ಬದಲು ಹೆಚ್ಚು ಜನಪ್ರಿಯಗೊಳ್ಳುತ್ತಿವೆ. ಕೈಮಗ್ಗ, ಕರಕುಶಲ, ರೇಷ್ಮೆ ಉದ್ಯಮ, ಶುಂಠಿರಸ ಉತ್ಪಾದನೆ, ಎಣ್ಣೆ ಉತ್ಪಾದನೆ, ಕಾಗದ ಮುದ್ರಣ, ಇಟ್ಟಿಗೆ, ಸಾಬೂನು ತಯಾರಿಕೆ ಮುಂತಾದ ಸಣ್ಣ ಕೈಗಾರಿಕೆಗಳಿವೆ. ರಬ್ಬರ್, ಕಾಫಿ, ಚಹಾ ಬೆಳೆಗಳೂ ಜನಪ್ರಿಯಗೊಳ್ಳುತ್ತಿವೆ. ಬಿದಿರಿನ ಉತ್ಪನ್ನ ಮತ್ತು ಶುಂಠಿ ಇಲ್ಲಿಂದ ರಫ್ತಾಗುವ ಪ್ರಮುಖ ವಸ್ತುಗಳಾಗಿವೆ.

## ಒಂದು ಲೋಕಸಭೆ, ಒಂದು ರಾಜ್ಯಸಭೆ ಸ್ಥಾನ

ಮಿಜೋರಾಂ ರಾಜ್ಯವು ಒಂದೇ ಲೋಕಸಭಾ ಸ್ಥಾನವನ್ನು ಮತ್ತು ಒಂದು ರಾಜ್ಯಸಭಾ ಸ್ಥಾನವನ್ನು ಹೊಂದಿದೆ.

ಮಿಜೋರಾಂ ಯೂನಿಯನ್, ಮಿಜೋರಾಂ ಪೀಪಲ್ ಕಾನ್ಫರೆನ್ಸ್, ಮಿಜೋರಾಂ ನ್ಯಾಷನಲ್ ಫ್ರಂಟ್, ಜೋರಾಂ ಪೀಪಲ್ ಮೂವ್‌ಮೆಂಟ್ ಮುಂತಾದ ಪ್ರಾದೇಶಿಕ ಪಕ್ಷಗಳೇ ಮಿಜೋರಾಂನಲ್ಲಿ ಆಡಳಿತ ನಡೆಸಿಕೊಂಡು ಬಂದಿವೆ. ಮಧ್ಯೆ ಕಾಂಗ್ರೆಸ್ ಪಕ್ಷವು ಸ್ವಲ್ಪ ಸಮಯ ಅಧಿಕಾರ ಹಿಡಿದಿತ್ತು. ಮಿಜೋರಾಂನಲ್ಲಿ ಮದ್ಯ ನಿಷೇಧ ಕಾನೂನು ಜಾರಿಯಲ್ಲಿದೆ. ಈ ಕಾನೂನು ತೆರವುಗೊಳಿಸಲು ಕಾಂಗ್ರೆಸ್ ಮುಂದಾದಾಗ ಅದಕ್ಕೆ ಚರ್ಚ್‌ಗಳಿಂದ ದೊಡ್ಡಮಟ್ಟದ ವಿರೋಧ ವ್ಯಕ್ತವಾಯಿತು. ಪರಿಣಾಮ ನಂತರ ಕಾಂಗ್ರೆಸ್ ಪಕ್ಷ ಹೇಳ ಹೆಸರಿಲ್ಲದಾಯಿತು. ಈಗ ಜೋರಾಂ ಪೀಪಲ್ ಮೂವ್‌ಮೆಂಟ್ ಅಧಿಕಾರದಲ್ಲಿದೆ. 2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ 40 ವಿಧಾನಸಭಾ ಸ್ಥಾನಗಳಲ್ಲಿ 27 ಸ್ಥಾನಗಳನ್ನು ಜೋರಾಂ ಪೀಪಲ್ ಮೂವ್‌ಮೆಂಟ್ ಪಡೆದಿತ್ತು. 10 ಕ್ಷೇತ್ರಗಳಲ್ಲಿ ಮಿಜೋರಾಂ ನ್ಯಾಷನಲ್ ಫ್ರಂಟ್, ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದಿದೆ. ಬಿಜೆಪಿ ಇದೇ ಮೊದಲ ಬಾರಿ ಮಿಜೋರಾಂನಲ್ಲಿ ಅಸ್ತಿತ್ವ ತೋರಿಸಿದ್ದು, 2 ಸ್ಥಾನಗಳನ್ನು ಪಡೆದಿದೆ.

‘ನಮ್ಮಲ್ಲಿ ಒಬ್ಬರೇ ಲೋಕಸಭಾ ಸದಸ್ಯರು, ಒಬ್ಬರೇ ರಾಜ್ಯಸಭಾ ಸದಸ್ಯರು ಇರುವುದರಿಂದ ದೆಹಲಿಯಲ್ಲಿ ನಮ್ಮ ಜನಪ್ರತಿನಿಧಿಗಳ ಮಾತಿಗೆ ಕಿಮ್ಮತ್ತು ದೊರೆಯುತ್ತಿಲ್ಲ. ಹಾಗಾಗಿ ಕೇಂದ್ರದಿಂದ ಮಿಜೋರಾಂಗೆ ಆರ್ಥಿಕ ಬೆಂಬಲ ಸಿಗುತ್ತಿಲ್ಲ’ ಎಂದು ಮಿಜೋರಾಂ ವಿಶ್ವವಿದ್ಯಾಲಯದ ಪ್ರೊಫೆಸರ್ ಅಡಾಲ್ಫ್ ಹಿಟ್ಲರ್ ಸೈಡೊ ವಿವರಿಸಿದರು.

ಅರಣ್ಯಕ್ಕೆ ಮಾರ್ಗ ನಿರ್ಮಿಸಿದಂತೆ ಗೋಚರಿಸುತ್ತಿರುವ ರೈಲ್ವೆ

